## 40. ಅಸಹಕಾರಕ್ಕೆ ಸರ್ಕಾರದ ಶಾಕ್ ಟ್ರೀಟ್‌ಮೆಂಟ್

ಸೋಂಕಿತರ ಚಿಕಿತ್ಸೆಗೆ ಸಹಕರಿಸದ ಖಾಸಗಿ ಆಸ್ಪತ್ರೆ ಹಾಗೂ ವೈದ್ಯಕೀಯ ಕಾಲೇಜುಗಳ ಶಾಕ್ ಟ್ರೀಟ್‌ಮೆಂಟ್‌ಗೆ ಸರ್ಕಾರ ಮುಂದಾಗಿದ್ದು, ಮೂಲ ಸವಲತ್ತುಗಳ ಕಡಿತದ ಕಾನೂನು ಅಸ್ತ್ರ ಪ್ರಯೋಗಿಸಲು ಸಜ್ಜಾಗಿದೆ.

ಪ್ರಾರಂಭಿಕ ಹಂತದಲ್ಲಿ ಬೆಂಗಳೂರು ದಕ್ಷಿಣ ವಲಯದ 8 ಖಾಸಗಿ ಆಸ್ಪತ್ರೆಗಳಿಗೆ ವಿಪತ್ತು ನಿರ್ವಹಣಾ ಕಾಯ್ದೆಯಡಿ ಸರ್ಕಾರ ನೋಟಿಸ್ ರವಾನಿಸಲಿದೆ. ಮೂಲ ಸವಲತ್ತುಗಳ ಕಡಿತ. ನೋಟಿಸ್‌ಗೂ ಸ್ಪಂದಿಸದಿದ್ದರೆ ವಿಪತ್ತು ನಿರ್ವಹಣೆ, ಕೆಪಿಎಂಇ ಹಾಗೂ ಸಾಂಕ್ರಾಮಿಕ ರೋಗಗಳ ತಡೆ ಕಾಯ್ದೆಗಳಡಿ ಕ್ರಿಮಿನಲ್ ಮೊಕದ್ದಮೆ ಹೂಡಲಿದೆ.

ರಾಜಧಾನಿಯಲ್ಲಿ ಸೋಂಕು ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಚಿಕಿತ್ಸೆಗೆ ಹಾಸಿಗೆಗಳ ಕೊರತೆ ಸರಿದೂಗಿಸಲು ಖಾಸಗಿ ನೆರವು ತುರ್ತು ಅಗತ್ಯವಾಗಿದೆ. ಸಂಘರ್ಷದ ಬದಲಿಗೆ, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮುನ್ನಡೆಯಲು ಯೋಚಿಸಿದ್ದರೂ ಪ್ರಯೋಜನವಾಗಿಲ್ಲ. ಪದೇಪದೇ ಸಭೆ ಕರೆದು ಚರ್ಚಿಸಿ ಒಪ್ಪಂದದಂತೆ ಶೇ.50 ಹಾಸಿಗೆ ಬಿಟ್ಟುಕೊಡಲು ತಿಳಿಸಿ ತಿಂಗಳು ಕಳೆದರೂ ಯಾವುದೇ ಬದಲಾವಣೆಯಾಗಿಲ್ಲ. ಮಹಾರಾಷ್ಟ್ರ, ದೆಹಲಿ ಸರ್ಕಾರಗಳ ಮಾದರಿಯಲ್ಲಿ ಕಠಿಣವಾಗಲು ನಿರ್ಧರಿಸಿದೆ.

ಕೊರೋನಾ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಸಿಎಂ ಗೃಹ ಕಚೇರಿ 'ಕೃಷ್ಣಾ'ದಲ್ಲಿ ದಕ್ಷಿಣ ವಲಯದ ಸಭೆ ನಡೆಸಿ, ಖಾಸಗಿ ಆಸ್ಪತ್ರೆಗಳು ಹಾಗೂ ವೈದ್ಯಕೀಯ ಕಾಲೇಜುಗಳ ಧೋರಣೆ ಬಗ್ಗೆ ಯಡಿಯೂರಪ್ಪ ತೀವ್ರ ಅಸಮಾಧಾನ ಹೊರಹಾಕಿದರು. ಮಾತುಕತೆ ನಡೆಸಿ ಮನವೊಲಿಸಿದ್ದಾಯಿತು. 4 ಬಾರಿ ಸಭೆ ನಡೆಸಿ ಒಪ್ಪಿಗೆಯಂತೆ ನಡೆದುಕೊಳ್ಳಲು ಸೂಚಿಸಿದ್ದಾಯಿತು. ಪ್ರತಿ ಬಾರಿ ಸಹಕರಿಸುತ್ತೇವೆ ಸೋಂಕಿತರ ಚಿಕಿತ್ಸೆಗೆ ಹಾಸಿಗೆಗಳನ್ನು ಕೊಡುತ್ತೇವೆ ಎಂದು ಹೇಳುತ್ತ ಮೊಂಡುತನ ತೋರಿದ್ದಾರೆ. ಖಡಕ್ ಎಚ್ಚರಿಕೆ ಕೊಟ್ಟ ಮೇಲೂ ಸರಿದಾರಿಗೆ ಬಾರದವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಿ ಎಂದು ಅಧಿಕಾರಿಗಳಿಗೆ ಸೂಚಿಸಿದರು. ಸರ್ಕಾರದ ಆದೇಶಗಳನ್ನು ಪಾಲನೆ ಮಾಡದವರ ವಿರುದ್ಧ ಕಾನೂನು ಅಸ್ತ್ರ ಚಲಾಯಿಸಿ, ಯಾವುದೇ ನೆಪವೊಡ್ಡಬೇಡಿ. ಸೋಂಕಿತರ ಚಿಕಿತ್ಸೆಗೆ ನಿರಾಕರಿಸಿದ ಖಾಸಗಿ ಆಸ್ಪತ್ರೆಗಳಿಗೆ ಮೂಲ ಸವಲತ್ತು ಕಡಿತಗೊಳಿಸಿ, ವಿಪತ್ತು ನಿರ್ವಹಣಾ ಕಾಯ್ದೆಯಡಿ ಕ್ರಮ ಜರುಗಿಸಿ ಎಂದು ತಾಕೀತು ಮಾಡಿದರು. ಕಂದಾಯ ಹಾಗೂ ವಲಯದ ಉಸ್ತುವಾರಿ ಸಚಿವ ಆರ್.ಅಶೋಕ್, ಸಂಸದ ತೇಜಸ್ವಿ ಸೂರ್ಯ, ಶಾಸಕರಾದ ಉದಯ ಗರುಡಚಾರ್, ರವಿ ಸುಬ್ರಮಣ್ಯ, ಮುಖ್ಯ ಕಾರ್ಯದರ್ಶಿ ಟಿ.ಎಂ.ವಿಜಯಭಾಸ್ಕರ್ ಉಪಸ್ಥಿತರಿದ್ದರು.

ನಿಗದಿತ ಗುರಿ ಮುಟ್ಟಿರುವುದು ಸೇರಿ ಪ್ರತಿ ವಾರದ ಪ್ರಗತಿ ವರದಿ ನನಗೆ ನೀಡಬೇಕು. ಆಯಾ ದಿನದ ಮಾಹಿತಿಯನ್ನು ವಲಯ ಉಸ್ತುವಾರಿ ಸಚಿವರಿಗೆ ಒಪ್ಪಿಸಿ, ಸಮಸ್ಯೆಗಳಿದ್ದರೆ ತಕ್ಷಣ ಬಗೆಹರಿಸಿಕೊಳ್ಳಿ. ಶಂಕಿತರ ಟೆಸ್ಟ್‌ಗೆ ಮುನ್ನ ಮೊಬೈಲ್ ಒಟಿಪಿ ಅಥವಾ ಬೇರೆ ದಾಖಲೆಯನ್ನು ಪಡೆದರೆ, ವರದಿ ಬಂದ ನಂತರ ಸೋಂಕು ದೃಢಪಟ್ಟ ವ್ಯಕ್ತಿಯನ್ನು ಸುಲಭವಾಗಿ ಪತ್ತೆಹಚ್ಚಲು ಸಾಧ್ಯವಿದೆ. ಅಂತರರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದ (ಬಿಐಇಸಿ) ಕೊರೋನಾ ಆರೈಕೆ ಕೇಂದ್ರಕ್ಕೆ ರೋಗ ಲಕ್ಷಣರಹಿತರನ್ನು ದಾಖಲಿಸಬೇಕು. ಇದರಿಂದ ನಗರದಲ್ಲಿರುವ ಆಸ್ಪತ್ರೆಗಳ ಮೇಲೆ ಒತ್ತಡ ತಗ್ಗಲಿದ್ದು, ಇತರೆ ಕಾಯಿಲೆ ಉಳ್ಳವರ ಚಿಕಿತ್ಸೆಗೂ ಕೆಲ ಆಸ್ಪತ್ರೆಗಳಲ್ಲಿ ಮೀಸಲಿಡಬೇಕು ಎಂದು ಮುಖ್ಯಮಂತ್ರಿಯವರು ಸೂಚಿಸಿದರು.

ಆಧಾರ:ವಿಜಯವಾಣಿ, ದಿನಾಂಕ:25.07.2020